# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 01 ಪ್ರಾ.ಸಾ. : 01**

**ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ**

8. ನಾನು 4 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನಮ್ಮ ಮಾವನವರಿಗೆ ಸುಮಾರು 50 ಎಕರೆಗಿಂತಲೂ ಹೆಚ್ಚಿನ ಜಮೀನು ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ಜನರು ಹೇಳಿರುವುದನ್ನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂಃ 45/ಬ ಎನ್ನುವುದರಲ್ಲಿ 6 ಎಕರೆ, ಚಿಲ್ಲರೆ ಜಮೀನು ಇರುತ್ತದೆ. ಸದರಿ ಸರ್ವೆ ನಂಃ 45/ಬ ನೇದರಲ್ಲಿ 2 ಎಕರೆ 32 ಗುಂಟೆ ಶಿವರಾಮ ಪಟಗಾರ ರವರ ಹೆಸರಿನಲ್ಲಿ, 2 ಎಕರೆ 32 ಗುಂಟೆ ದೇವಪ್ಪ ಪಟಗಾರ ರವರ ಹೆಸರಿನಲ್ಲಿ ಹಾಗೂ 33 ಗುಂಟೆ ಬೀರಪ್ಪನವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಃ 45/ಬ ನೇದಕ್ಕೆ ಸಂಬಂಧಿಸಿದಂತೆ ಕುಮಟಾ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ.

9. ಆರೋಪಿತರ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ, ಅದನ್ನು ಓದುವಂತೆ ಹೇಳಿದ್ದು, ಸಾಕ್ಷಿಯು ನನ್ನ ಕಣ್ಣಿಗೆ ಶಸ್ತ್ರ ಚಿಕಿತ್ಸೆಯಾಗಿದ್ದು, ಈ ದಿನ ನನ್ನ ಕನ್ನಡಕವನ್ನು ತಂದಿರುವುದಿಲ್ಲ, ಆದ್ದರಿಂದ ನನಗೆ ಓದಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ದೂರದ ವಸ್ತುಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ಸಣ್ಣ ವಸ್ತುಗಳು ಕಾಣುವುದಿಲ್ಲ, ಆದರೆ ದೊಡ್ಡ ವಸ್ತುಗಳು ಕಾಣುತ್ತವೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಿಸುವ ಮೊದಲು ನಾವು ಆರೋಪಿತರ ವಿರುದ್ಧ ಅಂಕೋಲಾ ಪೊಲೀಸ್ ಠಾಣೆಯ ಮೊಕದ್ದಮೆ ನಂಃ192/2017 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ನಮ್ಮ ಮಾವನವರಿಗೆ ಸೇರಿದ ಬೇರೆ ಸರ್ವೆ ನಂಬರ್ ನ ಜಮೀನನ್ನು ಪ್ರಮೋದ ರಾವ್ ಎನ್ನುವ ಪೊಲೀಸ್ ಅಧಿಕಾರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಮಾರಾಟ ಮಾಡಿದ ಜಮೀನು 5 ಎಕರೆಗಿಂತಲೂ ಹೆಚ್ಚು ಇತ್ತು

ಎಂದರೆ ಸರಿ. ಸದರಿ ಮಾರಾಟ ಮಾಡಿದ ಜಮೀನು ಸರ್ವೆ ನಂಃ 45/ಬ ರ ಜಮೀನಿಗೆ ಲಗತ್ತಾದ ಜಮೀನು ಎಂದರೆ ಸರಿ.

10. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಸುಮಾರು ಮನೆಗಳು ಇರುತ್ತವೆ ಎಂದರೆ ಸಾಕ್ಷಿಯ ದೂರ-ದೂರದಲ್ಲಿರುತ್ತವೆ ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ ಬ್ರಹ್ಮೂರ ಬಸ್ ತಂಗುದಾಣ ಸ್ವಲ್ಪ ದೂರದಲ್ಲಿರುತ್ತದೆ. ಆರೋಪಿತರು ಎಂದಿಗೂ ನಮ್ಮ ಜಮೀನಿಗೆ ಬಂದು, ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ವಾಸವಾಗಿರುವ ಮನೆಯು, ಅವರಿಗೆ ಸೇರಿದ ಮನೆ ಎಂದರೆ ಸರಿಯಲ್ಲ. ನನ್ನ ಮನೆಯು ಸರ್ವೆ ನಂಃ 45/ಬ ರಲ್ಲಿರುವ ನಮ್ಮ ಜಮೀನಿನಲ್ಲಿಯೇ ಇರುತ್ತದೆ. ಸದರಿ ಸರ್ವೆ ನಂಃ 45/ಬ ರಲ್ಲಿ ನಮಗೆ ಸೇರಿದ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯು ಕಲ್ಲಿನ ಗೋಡೆ ಹಾಗೂ ತಗಡಿನ ಛಾವಣಿಯ ಮನೆಯಾಗಿರುತ್ತದೆ. ಅಂಕೋಲಾ ಪೊಲೀಸ್ ಠಾಣೆಯ ಮೊಕದ್ದಮೆ ನಂಃ192/2017 ದಾಖಲಾದ ನಂತರ ಆರೋಪಿಗಳಿಗೆ ಸೇರಿದ ಭತ್ತದ ಗದ್ದೆ ಹಾಗೂ ತೋಟವನ್ನು ನಾಶಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಪಡಿತರ ಚೀಟಿ ಇರುತ್ತದೆ.

11. ಸರ್ವೆ ನಂಃ 45/ಬ ರಲ್ಲಿರುವ ಮನೆಯಲ್ಲಿ ನಾವು ಹೆಚ್ಚು ಉಳಿದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಗಳು ನನ್ನ ಜೊತೆ ಜಗಳ ಮಾಡಿ, ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ ಕಾರಣ, ನಾನು ಸದರಿ ಮನೆಯಲ್ಲಿ ಹೆಚ್ಚು ಉಳಿಯುವುದಿಲ್ಲ, ಆದರೆ ಆ ಮನೆಗೆ ಬಂದು-ಹೋಗಿ ಮಾಡುತ್ತೇನೆ. ದಿಃ 12-11-2017 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ನಾನು ಒಬ್ಬಳೇ ಮನೆಯಲ್ಲಿದ್ದಾಗ, ಆರೋಪಿತರು ಎಂದಿಗೂ ನಮ್ಮ ಜಮೀನಿಗೆ ಬಂದಿಲ್ಲ, ಉಳುಮ ಮಾಡಿಲ್ಲ ಹಾಗೂ ನನ್ನ ಜೊತೆ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ವಯಸ್ಸಾಗಿರುವ ಕಾರಣ, ನನಗೆ ಸರಿಯಾಗಿ ಕಿವಿ ಕೇಳುತ್ತಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ನನ್ನನ್ನು ಉದ್ದೇಶಿಸಿ, ಬೊಳಿ, ರಂಡೆ, ನಮ್ಮ ಮೇಲೆ ಕೇಸು ಹಾಕುತ್ತೀಯಾ, ನಿನ್ನ ಜಮೀನಿನಲ್ಲಿ ನಿನಗೆ ಮಣ್ಣು ಮುಕ್ಕಿಸುತ್ತೇವೆ ಎಂದು ಬೈದಿಲ್ಲ ಎಂದರೆ ಸರಿಯಲ್ಲ. ಪ್ರಮೋದ ರಾವ್ ಗೆ ಜಮೀನು ಮಾರಾಟ ಮಾಡುವ ಸಮಯದಲ್ಲಿ ಆರೋಪಿತರಿಗೆ ಸೇರಿದ ಜಮೀನನ್ನು ಮಾರಾಟ ಮಾಡುವ ಮಾತುಕತೆ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಉದ್ದೇಶದಿಂದ ಆರೋಪಿತರ ಮೇಲೆ ಎರಡು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

12. ನಾವು ಕಟ್ಟಿಗೆ ಹಾಕಿ ಒಲೆ ಹಚ್ಚುತ್ತೇವೆ ಎಂದರೆ ಸರಿ. ನಾವು ಒಲೆ ಹಚ್ಚಲು ಸೀಮೆಎಣ್ಣೆ ಬಳಸುತ್ತೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲು-1 ಸೀಮೆಎಣ್ಣೆ ಕ್ಯಾನ್, ಮುದ್ದೆ ಮಾಲು-2 ಬೆಂಕಿ ಪೊಟ್ಟಣ ಹಾಗೂ ಮುದ್ದೆ ಮಾಲು-3 ಪಂಜು ನಮ್ಮ ಮನೆಯದವುಗಳು ಎಂದರೆ ಸರಿಯಲ್ಲ. ಮುದ್ದೆ ಮಾಲು-3 ಪಂಜುಗೆ ಸುತ್ತಿರುವ ಬಟ್ಟೆ ನಮ್ಮ ಮನೆಯದು ಎಂದರೆ ಸರಿಯಲ್ಲ. ಮುದ್ದೆ ಮಾಲು-2 ಬೆಂಕಿ ಪೊಟ್ಟಣ ಯಾವ ಕಂಪನಿಯದು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಎಂದಿಗೂ ಸದರಿ ವಸ್ತುಗಳನ್ನು ನಮ್ಮ ಮನೆಗೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ಬ್ರಹ್ಮೂರನಿಂದ ಕುಮಟಾಕ್ಕೆ ಹೋಗಲು ಬಹಳಷ್ಟು ದಾರಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಎಂದಿಗೂ ನನ್ನನ್ನು ಮನೆಯ ಒಳಗೆ ದೂಡಿ, ಬಾಗಿಲನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನಾನೇ ಪೊಲೀಸ್ ಠಾಣಗೆ ಹೋಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಎಂದಿಗೂ ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ ಆರೋಪಿತರ ನಡುವೆ ಜಮೀನಿನ ವಿವಾದ ಇದ್ದು, ಆ ಕಾರಣಕ್ಕಾಗಿ ನಾನು ಆರೋಪಿತರು ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ